## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 22–06–2015ರ ನಡವಳಿಗಳು

**ವಿಷಯದ ಸಂಖ್ಯೆ : 103 / 2015–16**

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜಾಹೀರಾತು ನಿಷೇಧಿಸುವಂತೆ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಹಿಂಪಡೆಯುವ ಬಗ್ಗೆ.

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:15–05–2015 ಹಾಗೂ ದಿನಾಂಕ:15–06–2015 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಲಿ ಇರುವ ಜಾಹೀರಾತುಗಳನ್ನು ಕುರಿತಂತೆ ಮಾನ್ಯ ಆಡಳಿತಗಾರರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗಿರುತ್ತದೆ.

ಸದರಿ ಸಭೆಯಲ್ಲಿ ತೀರ್ಮಾನಿಸಿದಂತೆ ದಿನಾಂಕ:28.01.2015 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ, ವಿಷಯ ಸಂಖ್ಯೆ:03(282)2015ರಂತೆ ಅಂಗಡಿ ಮುಂಗಟ್ಟುಗಳ ಮೇಲಿನ ಜಾಹೀರಾತುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ರೀತಿಯ ಜಾಹೀರಾತುಗಳನ್ನು ನಿಷೇಧಿಸಿ 11 ಅಂಶಗಳ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು ಹಾಗೂ ಸದರಿ ನಿರ್ಣಯವನ್ನು ಅಂಗೀಕರಿಸುವ ಬಗ್ಗೆ ಸರ್ಕಾರಕ್ಕೆ ದಿನಾಂಕ:20.02.2015 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈವರೆಗೆ ಈ ಬಗ್ಗೆ ಸರ್ಕಾರದ ಅನುಮೋದನೆ ಬಂದಿರುವುದಿಲ್ಲ.

ಆದರೆ, ಸದರಿ ನಿರ್ಣಯದ ಬಗ್ಗೆ ದಿನಾಂಕ:15–05–2015 ಹಾಗೂ ದಿನಾಂಕ:15–06–2015 ರಂದು ನಡೆಸಿದ ಸಭೆಗಳಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಸಂಪನ್ಮೂಲ ಕ್ರೂಢೀಕರಣದ ದೃಷ್ಟಿಯಿಂದ ಜಾಹೀರಾತು ನಿಷೇಧಿಸುವ ಬಗ್ಗೆ ಸರ್ಕಾರಕ್ಕೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಹಿಂಪಡೆದು ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ರೀತಿಯ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ವಲಯ ಮಟ್ಟದ ಅಪರ/ಜಂಟಿ ಆಯುಕ್ತರು ಕ್ರಮವಹಿಸಲು ಹಾಗೂ ಅಧಿಕೃತ ಜಾಹೀರಾತುಗಳ ಬಗ್ಗೆ ಬೈಲಾ ಪ್ರಕಾರ ಕ್ರಮವಹಿಸುವಂತೆ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:20–02–2015 ರಂದು ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಜಾಹೀರಾತುಗಳನ್ನು ನಿಷೇಧಿಸುವಂತೆ ಸರ್ಕಾರಕ್ಕೆ ಸಲ್ಲಿಸಲಾದ ಮೇಲ್ಕಂಡ ಕೌನ್ಸಿಲ್ ಸಭೆಯ ನಿರ್ಣಯವನ್ನು ರದ್ದುಪಡಿಸಲು ಮತ್ತು ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಅನಧಿಕೃತ ಜಾಹೀರಾತುಗಳನ್ನು ತಕ್ಷಣ ತೆರವುಗೊಳಿಸುವ ಬಗ್ಗೆ ಹಾಗೂ ಅಧಿಕೃತ ಜಾಹೀರಾತುಗಳ ಬಗ್ಗೆ ಹಾಲಿ ಇರುವ ಬೈಲಾಗಳಂತೆ ಕ್ರಮವಹಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17–06–2015ರ ಟಿಪ್ಪಣಿ.

ತೀರ್ಮಾನ: **"ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22-06-2015ರ ನಡವಳಿಗಳು**

**ವಿಷಯದ ಸಂಖ್ಯೆ : 104 / 2015-16**

ವಿಷಯ: ಉದ್ದಿಮೆ ಪರವಾನಿಗೆ ಪಡೆಯಲು ಬೇಕಾಗಿರುವ ದಾಖಲಾತಿಗಳನ್ನು ಸರಳೀಕರಿಸುವ ಬಗ್ಗೆ.

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 353, 354, 447 ಹಾಗೂ ಬೈಲಾ 41 ರಂತೆ ಉದ್ದಿಮೆದಾರರು ಪರವಾನಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು ಅತ್ಯಾವಶ್ಯಕವಾಗಿರುತ್ತದೆ.

1. ಮಾಲೀಕರ ಒಪ್ಪಿಗೆ ಪತ್ರ,
2. ಅಕ್ಕಪಕ್ಕದವರ ನಿರಾಕ್ಷೇಪಣಾ ಪತ್ರ
3. ಕಂದಾಯ ವಸೂಲಾತಿಯ ರಶೀದಿ
4. ಖಾತಾ ಪ್ರಮಾಣ ಪತ್ರ
5. ಮಂಜೂರಾತಿ ನಕ್ಷೆ
6. ಮಾಲಿನ್ಯ ಮಂಡಳಿಯ ನಿರಾಕ್ಷೇಪಣಾ ಪತ್ರ

ಈ ದಾಖಲಾತಿಗಳಲ್ಲಿ ಹೆಚ್ಚಿನ ದಾಖಲಾತಿಗಳನ್ನು ಉದ್ದಿಮೆದಾರರು ನಡೆಸುವ ಉದ್ದಿಮೆಗಳಿಗೆ ಅನುಗುಣವಾಗಿ ಕಡ್ಡಾಯಗೊಳಿಸಲಾಗಿರುತ್ತದೆ. ಇದರಿಂದಾಗಿ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ದಿಮೆಗಳನ್ನು ಪರವಾನಗಿ ವ್ಯಾಪ್ತಿಗೆ ಒಳಪಡಿಸಲು ಕಷ್ಟವಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ ಮತ್ತು ಬೈಲಾ ಪ್ರಕಾರ ಉದ್ದಿಮೆದಾರರಿಂದ ಯಾವುದೇ ಸಮಯದಲ್ಲಿ ದಾಖಲಾತಿಗಳನ್ನು ಹಾಜರುಪಡಿಸುವಂತೆ, ಸೂಚಿಸಲು ಅವಕಾಶವಿರುತ್ತದೆ. ಬೆಸ್ಕಾಂರವರು ವಾಣಿಜ್ಯ ಬಳಕೆಗಾಗಿ ನೀಡುವ ವಿದ್ಯುತ್ ಸಂಪರ್ಕಗಳನ್ನು ಹಾಗೂ ವಾಣಿಜ್ಯ ತೆರಿಗೆ ಇಲಾಖೆಯಿಂದ ನೀಡಿರುವ ಪರವಾನಗಿಗಳಿಗೆ ಹೋಲಿಸಿದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ನೀಡಿರುವ ಸಂಖ್ಯೆ ತುಂಬಾ ಕಡಿಮೆಯಾಗಿರುತ್ತದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಲಯ ವರ್ಗೀಕರಣದಂತೆ (ಜೋನಲ್ ರೆಗ್ಯೂಲೇಷನ್) ವಾಣಿಜ್ಯ ವಲಯಗಳಲ್ಲಿನ ಎಲ್ಲಾ ಉದ್ದಿಮೆಗಳಿಗೆ ಪರವಾನಗಿ ಪಡೆಯಲು ಬೇಕಾಗಿರುವ ದಾಖಲಾತಿಗಳನ್ನು ಸರಳೀಕರಿಸುವುದು ಅಗತ್ಯ. ಈ ಹಿನ್ನಲೆಯಲ್ಲಿ, ವಾಣಿಜ್ಯ ವಲಯಗಳಲ್ಲಿ 1) ವಿದ್ಯುತ್ ಬಿಲ್ಲು 2) ಮಾಲೀಕರೊಂದಿಗೆ ಮಾಡಿಕೊಂಡಿರುವ ಬಾಡಿಗೆ / ಗುತ್ತಿಗೆ ಕರಾರು ಪತ್ರ ನೀಡಿದಲ್ಲಿ ಪರವಾನಗಿ ವಿತರಿಸಬಹುದು.

ವಸತಿ ವಲಯದಲ್ಲಿ (40 ಅಡಿಗಿಂತ ಹೆಚ್ಚಿರುವ ರಸ್ತೆಗಳಲ್ಲಿ) 1) ವಿದ್ಯುತ್ ಬಿಲ್ಲು 2) ಮಾಲೀಕರೊಂದಿಗೆ ಮಾಡಿಕೊಂಡಿರುವ ಬಾಡಿಗೆ / ಗುತ್ತಿಗೆ ಕರಾರು ಪತ್ರ 3) ಅಕ್ಕಪಕ್ಕದವರ ಒಪ್ಪಿಗೆ ಪತ್ರಗಳನ್ನು ನೀಡಿದಲ್ಲಿ ಪರವಾನಗಿ ವಿತರಿಸಬಹುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಉದ್ದಿಮೆ ಪರವಾನಗಿ ಪಡೆಯಲು ಬೇಕಾಗಿರುವ ದಾಖಲಾತಿಗಳನ್ನು ಮೇಲಿನಂತೆ ಸರಳೀಕರಿಸುವ ಬಗ್ಗೆ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-06-2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು